# ಕತೆಗಾರರ ಕೈಯಲ್ಲಿ ‘ಕಾಗೆ’ ಎಂಬ ರೂಪಕ

ಕಾಗೆಯನ್ನು ಕೇಂದ್ರಮಾಡಿಕೊಂಡು ಸೃಷ್ಟಿಯಾಗಿರುವ ಇಲ್ಲಿನ ಮೂರು ಕತೆಗಳು ಹಲ ಬಗೆಯಲ್ಲಿ ಮುಖ್ಯವಾಗುತ್ತವೆ. ಮೂವರು ಕತೆಗಾರರ ಕೈಯಲ್ಲಿ ‘ಕಾಗೆ’ ಎಂಬ ರೂಪಕ ವಿಸ್ತರಿಸಿಕೊಂಡಿರುವ ರೀತಿ ಸದ್ಯದ ಅನೇಕ ದಂದುಗಗಳಿಗೆ ಎಡತಾಕುತ್ತದೆ. ಕಾಗೆಯನ್ನು ‘ರೂಪಕದರಿವು’ ಎಂದು ಕರೆಯಲು ಕಾರಣ ಇಲ್ಲಿನ ಕತೆಗಳಲ್ಲಿ ಮನುಷ್ಯ ಜಗತ್ತು, ಮಾನವೀಯ ಸ್ಪರ್ಶಗಳನ್ನು ಕಳೆದುಕೊಳ್ಳುವ ಹಾದಿಯಲ್ಲಿರುವಾಗ ಈ ಅರಿವು ಎಚ್ಚರಿಸುತ್ತದೆ. ಅಮರೇಶ ನುಗಡೋಣಿ ಅವರ ಮೊದಲಕತೆ ಎಂದಿನಂತೆ ಗ್ರಾಮಲೋಕ ಮತ್ತು ಜಾತಿಸಂಕರಗಳಿಂದ ಆವರಿಸಿದ್ದರೂ, ಕಾಗೆಯ ಸ್ಪರ್ಶದಿಂದ ಮಾತ್ರ ತಾಜಾತನವನ್ನು ನೀಡುತ್ತದೆ. ಧೂಳೇಶನೆಂಬ ವ್ಯಕ್ತಿ ಕಾಗೆಯಿಂದಲೇ ಕೊಲೆಯಿಂದ ತಪ್ಪಿಸಿಕೊಳ್ಳುವ ತಂತ್ರ ಮಾರ್ಮಿಕವಾಗಿದೆ. ಇಲ್ಲಿಂದಲೇ ಇನ್ನಿತರ ಪಾತ್ರಗಳು ತಮ್ಮ ಅರಿವನ್ನು ತಂದುಕೊಳ್ಳುವ ಅವಕಾಶಗಳಿದ್ದರೂ ಎಡುವುತ್ತಾರೆ. ಕತೆಯ ಅಂತಿಮ ದೃಶ್ಯಗಳಾದ ಅಲಾಯಿಕುಣಿತ, ಕತ್ತಲು, ಬಿರುಗಾಳಿ, ಗುಡುಗುಗಳು ಕತ್ತಲಿನ ರೂಪಕವನ್ನು ನೆನಪಿಸಿದರೂ ಅಸಹಜವೆನಿಸುವುದಿಲ್ಲ. ವಿಚಿತ್ರವೆಂದರೆ, ಕೊಲೆಮಾಡಬೇಕೆಂದು ಬಂದವನು ಇವುಗಳ ಸದ್ದಿನಲ್ಲಿ ತಾನೇ ಕೊನೆಗೊಳ್ಳುವುದು.




ಕಾಗೆ
(ಒಂದು ದೃಶ್ಯ; ಮೂರು ಸ್ಪರ್ಶ)
ಲೇ: ಅಮರೇಶ ನುಗಡೋಣಿ
ಮಹಾಂತೇಶ ನವಲಕಲ್
ಚಿದಾನಂದ ಸಾಲಿ
ಪ್ರ: ಪಲ್ಲವ ಪ್ರಕಾಶನ,
ಚೆನ್ನಪಟ್ಟಣ, ಬಳ್ಳಾರಿ

ಅಮರೇಶರ ನಂತರದ ತಲೆಮಾರಿನ ಇನ್ನಿಬ್ಬರು ಕತೆಗಾರರ ಕತೆಗಳು ಕಟ್ಟುವಿಕೆಯ ದೃಷ್ಟಿಯಿಂದ ಮತ್ತು ಸಮಕಾಲೀನತೆಯಿಂದ ಮೇಲಿನ ‘ರೂಪಕದರಿವನ್ನು’ ಮತ್ತಷ್ಟು ವಿಸ್ತರಿಸುತ್ತವೆ. ಮಹಾಂತೇಶ ನವಲಕಲ್ ಅವರ ಕತೆ ಕಾಗೆಯನ್ನು ಮನುಷ್ಯನ ಅನೇಕ ಸಂಘರ್ಷಗಳ ಕೇಂದ್ರವಾಗಿ ಎತ್ತಿಕೊಂಡಿದೆ. ನಿಸರ್ಗನಿಯಮಗಳು ಮತ್ತು ಮನುಷ್ಯನ ವೈರುಧ್ಯಗಳು ಇಲ್ಲಿ ಮುಖ್ಯವಾಗುತ್ತವೆ. ಈ ಕತೆಯ ವ್ಯಕ್ತಿ ‘ಕಪ್ಪು ಜಗತ್ತಿನ’ ನಿಯಮಗಳನ್ನು ಜಾರಿಗೆ ತರುವ ಕನಸುಗಳಿದ್ದರೂ ಸದ್ಯದ ಸ್ಥಿತಿಗತಿಗಳಿಂದ ವಿಮುಖಗೊಳಿಸುತ್ತವೆ. ಸಿದ್ಧಾಂತ, ಕಪ್ಪುಪ್ರತಿಮೆಗಳು, ಜೀವನಕ್ರಮಗಳು ಇಲ್ಲಿ ಕಾಗೆ ತನ್ನ ರೆಕ್ಕೆ ಮತ್ತು ಕಣ್ಣುಗಳನ್ನು ಕಳೆದುಕೊಂಡಂತೆ ಕಳೆದುಕೊಂಡಿವೆ. ಚಿದಾನಂದ ಸಾಲಿಯವರ ಕತೆ ತನ್ನದೇ ಶೈಲಿಯಲ್ಲಿ ಚೆನ್ನಪ್ಪನೆಂಬ ವ್ಯಕ್ತಿಯ ಹಲ ಬಗೆಯ ಮಾನಸಿಕ ಅವಸ್ಥಾಂತರಗಳನ್ನು ಅನಾವರಣಗೊಳಿಸುತ್ತದೆ. ಮನುಷ್ಯನೊಬ್ಬನ ತಿಕ್ಕಲುತನಗಳು ಕೂಡ ಅನೇಕ ಬಾರಿ ಅವನನ್ನು ಅವಧೂತನನ್ನಾಗಿ ಮಾಡಬಲ್ಲವು ಎಂಬುದಕ್ಕೆ ಇದೊಂದು ಸಣ್ಣ ನಿದರ್ಶನ.

**● ಸುರೇಶ ನಾಗಲಮಡಿಕೆ**